ಅಧ್ಯಕ್ಷರು: ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಒಬ್ಬ ಮಾನ್ಯ ಸದಸ್ಯರು: ಕನ್ನಡ ಭಾಷೆಯ ಬಗ್ಗೆ ಗೌರವ ಇದೆ ಎಂದು ಹೇಳುತ್ತಾರೆ. ಅದರ ಮೇಲೆ ಚರ್ಚೆ ಏಕೆ ಬೇಕು?

ಅಧ್ಯಕ್ಷರು: ನಾನು ಅದರ ಬಗ್ಗೆ ಅವರಿಗೆ ಈಗಾಗಲೇ ಸೂಚನೆ ಕೊಟ್ಟಿದ್ದೇನೆ. ಈಗ ಚರ್ಚೆ ಬೇಡ. ತಾವು ಉತ್ತರ ಹೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಉದ್ದೇಶಪೂರ್ವಕವಾಗಿ ಕನ್ನಡ ಮಾತನಾಡಲು ಬರುವುದಿಲ್ಲ ಎಂದು ಹೇಳುತ್ತಾರೆ. ಅವರಿಗೆ ಕನ್ನಡ ಮಾತನಾಡಲು ಬರುತ್ತದೆ. ಬೇಕೆಂದೇ ಅವರು ಮಾತನಾಡುತ್ತಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅವರು ನನ್ನ ಜೊತೆಯಲ್ಲಿ ಬಹಳ ವರ್ಷಗಳಿಂದ ಒಡನಾಟದವರು. ನಾವೆಲ್ಲಾ ಪರಿಚಿತರು, ಸ್ನೇಹಿತರು, ಅವರು ನಿಶ್ಚಿತವಾಗಿ ಕನ್ನಡದಲ್ಲಿ ಮಾತನಾಡುತ್ತಾರೆ. ಅವರು ನನ್ನ ಜೊತೆಯಲ್ಲಿ ಕನ್ನಡದಲ್ಲೇ ಮಾತನಾಡುವುದು. ಅವರು ಅಧಿವೇಶನದಲ್ಲಿ ಕನ್ನಡದಲ್ಲಿ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ತಾವು ಅದನ್ನು ಅನ್ಯಥಾ ಭಾವಿಸಬಾರದು.

ಶ್ರೀ ಹೆಚ್.ಸಿ. ಬಾಲಕೃಷ್ಣ: ಹಾಗಾದರೆ ನೀವೇನಾದರೂ ಅವರಿಗೆ ಇಂಗ್ಲೀಷಿನಲ್ಲಿ ಮಾತನಾಡಲು ಹೇಳಿರುವಿರಾ? ಕನ್ನಡ ಬರುತ್ತದೆ ಎನ್ನುತ್ತಾರೆ. ಕನ್ನಡದಲ್ಲಿ ಮಾತನಾಡುವುದಿಲ್ಲ ಎಂದರೆ ಅರ್ಥವೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ನಮ್ಮ ಇಲಾಖೆಯ ಅಧಿಕಾರಿಗಳಿಂದ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆ ಆಗದೇ ಇರುವಂತೆ ಎಚ್ಚರಿಕೆ ವಹಿಸಿ, ಯಾವುದೇ ರೀತಿಯ drop out ಆಗದೇ ಅವರು ಶಿಕ್ಷಣವನ್ನು ಮುಂದುವರೆಸುವುದಕ್ಕೆ ಬೇಕಾದಂಥ ಕ್ರಮವನ್ನು ನಮ್ಮ ಇಲಾಖೆಯಿಂದ ನಾವು ತೆಗೆದುಕೊಳ್ಳುತ್ತೇವೆ.

ವಿದ್ಯುತ್ ಸರಬರಾಜು

24 (47) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) :– ಮಾನ್ಯ ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಎಷ್ಟು ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ; ಫೇಸ್ ಹಾಗೂ ಗಂಟೆಗಳ ವಿವರ ನೀಡುವುದು;

(ಆ) ರಾಜ್ಯದ ಗ್ರಾಮೀಣ ಪ್ರದೇಶಕ್ಕೆ 3 ಫೇಸ್ ವಿದ್ಯುತ್‌ನ್ನು ಎಷ್ಟು ಗಂಟೆಗಳ ಕಾಲ ಸರಬರಾಜು ಮಾಡಲಾಗುವುದು;

(ಇ) ರಾಜ್ಯದ ಗ್ರಾಮೀಣ ಪ್ರದೇಶಕ್ಕೆ ಸಿಂಗಲ್ ಫೇಸ್ ವಿದ್ಯುತ್‌ನ್ನು ಎಷ್ಟು ಗಂಟೆಗಳ ಕಾಲ ಸರಬರಾಜು ಮಾಡಲಾಗುವುದು;

(ಈ) ರಾಜ್ಯದಲ್ಲಿ ಎಷ್ಟು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ; (ವಿವರ ನೀಡುವುದು)

(ಉ) ಕೊಪ್ಪಳ ಜಿಲ್ಲೆಗೆ ಎಷ್ಟು ಮೆಗಾವ್ಯಾಟ್ ವಿದ್ಯುತ್ ಬೇಕಾಗಿರುತ್ತದೆ;

(ಊ) ಸದ್ಯದಲ್ಲಿ ಎಷ್ಟು ಮೆಗಾವ್ಯಾಟ್ ವಿದ್ಯುತ್‌ನ್ನು ಆಯಾ ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

(ಋ) ಅನಿಯಮಿತ ವಿದ್ಯುತ್ ಕಡಿತಕ್ಕೆ ಕಾರಣವೇನು;

(ಎ) ರಾಜ್ಯದ ರೈತರಿಗೆ ಉಚಿತ ವಿದ್ಯುತ್ ನೀಡಲಾಗುವುದೇ; ಹಾಗಿದ್ದಲ್ಲಿ, ಈ ಸೌಲಭ್ಯವನ್ನು ಎಂದಿನಿಂದ ಜಾರಿಗೆ ತರಲಾಗುವುದು? (ವಿವರ ನೀಡುವುದು)

ಶ್ರೀ ಕೆ.ಎಸ್. ಈಶ್ವರಪ್ಪ (ಮಾನ್ಯ ಇಂಧನ ಸಚಿವರು) .

(ಅ), (ಆ) ಮತ್ತು (ಇ) ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ತುರ್ತು ಪರಿಸ್ಥಿತಿಗಳಲ್ಲಿ ಹೊರತಾಗಿ ಸಾಮಾನ್ಯವಾಗಿ ದಿನವಹಿ 9 ಗಂಟೆಗಳ ಅವಧಿಗೆ 3 ಫೇಸ್ ವಿದ್ಯುತ್ ಹಾಗೂ 9 ಗಂಟೆಗಳ ಅವಧಿಗೆ ಸಿಂಗಲ್ ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

(ಈ) ರಾಜ್ಯದಲ್ಲಿ ಪ್ರಸ್ತುತ ದಿನವಹಿ 4,366 ಮೆಗಾವ್ಯಾಟ್‌ನಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿದ್ದು, ವಿವಿಧ ವಿದ್ಯುತ್ ಉತ್ಪಾದನಾ ಕೇಂದ್ರಗಳಲ್ಲಿ ಉತ್ಪಾದನೆಯಾಗುತ್ತಿರುವ ವಿದ್ಯುತ್ತಿನ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

(ದಿನಾಂಕ: 19–07–2008ರ ವಿವರಗಳು)

ಕ್ರ.ಸಂ	ವಿದ್ಯುತ್ ಉತ್ಪಾದನಾ ಕೇಂದ್ರದ ಹೆಸರು	ವಿದ್ಯುತ್ ಲಭ್ಯತೆ (ಮೆಗಾವ್ಯಾಟ್‌ಗಳಲ್ಲಿ)
1.	ರಾಯಚೂರು ಶಾಖೋತ್ಪನ್ನ ವಿದ್ಯುತ್ ಘಟಕ	817
2	ಶರಾವತಿ, ನಾಗಝರಿ, ವರಾಹಿ	1695

	ಮತ್ತು ಇತರೆ ಜಲ ವಿದ್ಯುತ್ ಉತ್ಪಾದನಾ ಕೇಂದ್ರಗಳು	
3	ಕದ್ರ, ಕೊಡಸಳ್ಳಿ, ಗೇರುಸೊಪ್ಪ ಮತ್ತು ಇತರೆ ಜಲ ವಿದ್ಯುತ್ ಉತ್ಪಾದನಾ ಕೇಂದ್ರಗಳು	293
4	ಯಲಹಂಕ ಡೀಸಲ್ ಉತ್ಪಾದನಾ ಕೇಂದ್ರ	30
5	ಸ್ವತಂತ್ರ ವಿದ್ಯುತ್ ಉತ್ಪಾದಕರು	90
6	ಕೇಂದ್ರದಿಂದ ರಾಜ್ಯದ ಪಾಲು	1441
	ಒಟ್ಟು	**4366**

(ಉ) ಕೊಪ್ಪಳ ಜಿಲ್ಲೆಗೆ ದಿನವಹಿ ಸರಾಸರಿ 135 ಮೆಗಾವ್ಯಾಟ್‌ನಷ್ಟು ವಿದ್ಯುತ್ ಬೇಕಾಗಿರುತ್ತದೆ.

(ಊ) ಪ್ರಸ್ತುತ ದಿನವಹಿ 4087 ಮೆಗಾವ್ಯಾಟ್ ವಿದ್ಯುತ್ತಿನ ಜಿಲ್ಲಾವಾರು ಹಂಚಿಕೆಯ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

(ಋ) ಮುಂಗಾರು ಮಳೆ ವಿಳಂಬವಾದುದರಿಂದ ಲಿಂಗನಮಕ್ಕಿ ಸೂಪಾ, ವರಾಹಿ, ಕದ್ರಾ, ಕೊಡಸಳ್ಳಿ ಮತ್ತು ಗೇರುಸೊಪ್ಪ ಜಲಾಶಯಗಳ ಮಟ್ಟ ಕುಸಿದಿದೆ. ಇದೇ ಪರಿಸ್ಥಿತಿ ಮುಂದುವರಿದರೆ 10 ರಿಂದ 15 ದಿನಗಳಲ್ಲಿ ಈ ಜಲಾಶಯಗಳ ವಿದ್ಯುತ್ ಉತ್ಪಾದನೆ ನಿಲ್ಲಿಸಬೇಕಾಗುತ್ತದೆ. ರಾಯಚೂರು ಶಾಖೋತ್ಪನ್ನ ಕೇಂದ್ರದಲ್ಲಿ 2 ಘಟಕಗಳು ದುರಸ್ಥಿ ಕಾರ್ಯದಲ್ಲಿರುವುದರಿಂದ ಮತ್ತು ಕಲ್ಲಿದ್ದಲಿನ ಕೊರತೆಯಿಂದ ವಿದ್ಯುತ್ ಉತ್ಪಾದನೆ ಕಡಿಮೆಯಾಗಿರುತ್ತದೆ. ಒರಿಸ್ಸಾದ ತಾಲ್ಚೇರ್, ಆಂಧ್ರಪ್ರದೇಶದ ರಾಮಗುಂಡಂ ಹಾಗೂ ತಮಿಳುನಾಡಿನ ನೈವೇಲಿಯಲ್ಲಿ ವಿದ್ಯುತ್ ಉತ್ಪಾದನಾ ಘಟಕಗಳ ದುರಸ್ಥಿ ಕಾರ್ಯ ನಡೆಯುತ್ತಿರುವುದರಿಂದ, ಕೇಂದ್ರ ಉತ್ಪಾದನಾ ಘಟಕಗಳಿಂದ ಬರಬೇಕಾದ ಕರ್ನಾಟಕದ ಪಾಲೂ ಸಹ ಕಡಿಮೆಯಾಗಿದೆ. ಹಾಗೂ ಇಂಡಿಯನ್ ಎಲೆಕ್ಟ್ರಿಸಿಟಿ ಗ್ರಿಡ್ ಕೋಡ್ (ಐಇಜಿಸಿ) ಮತ್ತು ಕೇಂದ್ರ ವಿದ್ಯುತ್ ನಿಯಂತ್ರಣ ಆಯೋಗ (ಸಿಇಆರ್‌ಸಿ) ನಿಯಮಗಳ ಪ್ರಕಾರ ವಿದ್ಯುತ್ ಜಾಲದ ತರಂಗಾಂತರವನ್ನು 49 ತರಂಗಗಳಿಗಿಂತ ಹೆಚ್ಚಿಗೆ ಇರುವಂತೆ ಕ್ರಮಕೈಗೊಳ್ಳಬೇಕಾಗಿರುತ್ತದೆ. ಆದುದರಿಂದ ವಿದ್ಯುತ್ತಿನ ಲಭ್ಯತೆಗೆ ತಕ್ಕಂತೆ ವಿದ್ಯುತ್ತಿನ ಬಳಕೆಯನ್ನು

ನಿಯಂತ್ರಿಸಲು ಅನಿಯಮಿತ ವಿದ್ಯುತ್ ಕಡಿತವನ್ನು ಮಾಡುವುದು ಅನಿವಾರ್ಯವಾಗಿರುತ್ತದೆ. ಇಲ್ಲದಿದ್ದಲ್ಲಿ ಇಡೀ ವಿದ್ಯುತ್ ವ್ಯವಸ್ಥೆಯೇ ಸಂಪೂರ್ಣವಾಗಿ ಕುಸಿಯುವ ಸಂಭವವಿರುತ್ತದೆ.

(ಎ) ಹೌದು. ರಾಜ್ಯದ ರೈತರ 10 ಹೆಚ್.ಪಿ. ಸಾಮರ್ಥ್ಯದವರೆಗಿನ ನೀರಾವರಿ ಪಂಪುಸೆಟ್ಟುಗಳಿಗೆ ಉಚಿತ ವಿದ್ಯುತ್ ಸೌಲಭ್ಯವನ್ನು ದಿನಾಂಕ 1–8–2008ರಿಂದ ಜಾರಿಗೊಳಿಸಲು 2008–09ರ ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿದೆ.

ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಕರಡಿ ಸಂಗಣ್ಣರವರ ಚುಕ್ಕೆ ಗುರುತಿನ ಪ್ರಶ್ನೆ

ಸಂಖ್ಯೆ 47 ಕ್ಕೆ ಅನುಬಂಧ

ಕ್ರ.ಸಂ	ಜಿಲ್ಲೆಯ ಹೆಸರು	ಪ್ರಸ್ತುತ ದಿನವಹಿ ಹಂಚಿಕೆ ಮಾಡಲಾಗಿರುವ ವಿದ್ಯುತ್ ಪ್ರಮಾಣ (ಮೆಗಾ ವ್ಯಾಟ್‌ಗಳಲ್ಲಿ)
	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ	
1	ಬೆಂಗಳೂರು ನಗರ	1039
2	ಬೆಂಗಳೂರು ಗ್ರಾಮಾಂತರ	162
3	ರಾಮನಗರ	54
4	ಕೋಲಾರ	169
5	ಚಿಕ್ಕಬಳ್ಳಾಪುರ	181
6	ತುಮಕೂರು	271
7	ಚಿತ್ರದುರ್ಗ	105
8	ದಾವಣಗೆರೆ	118
	ಒಟ್ಟು	**2099**
	ಮಂಗಳೂರು ವಿದ್ಯುತ್ ಸರಬರಾಜು ಕಂಪನಿ	
9	ದಕ್ಷಿಣ ಕನ್ನಡ	110
10	ಉಡುಪಿ	46

11	ಶಿವಮೊಗ್ಗ	62
12	ಚಿಕ್ಕಮಗಳೂರು	35
	ಒಟ್ಟು	**253**
	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ	
13	ಮೈಸೂರು– ಮಡಿಕೇರಿ	187
14	ಮಂಡ್ಯ	104
15	ಚಾಮರಾಜನಗರ	26
	ಹಾಸನ	61
	ಒಟ್ಟು	**378**
	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ	
16	**ಧಾರವಾಡ**	**126**
17	**ಗದಗ**	**33**
18	**ಬೆಳಗಾವಿ**	**261**
19	**ಕಾರವಾರ**	**48**
20	**ಹಾವೇರಿ**	**60**
21	**ಬಾಗಲಕೋಟೆ**	**157**
22	**ಬಿಜಾಪುರ**	**112**
	ಒಟ್ಟು	**797**
	ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ	
23	**ಗುಲ್ಬರ್ಗಾ**	**210**
24	**ರಾಯಚೂರು**	**80**
25	**ಬೀದರ್**	**80**
26	**ಕೊಪ್ಪಳ**	**85**
27	ಬಳ್ಳಾರಿ	**105**
	ಒಟ್ಟು	**560**
	ಒಟ್ಟು ಮೊತ್ತ	**4087**

ಶ್ರೀ ಕರಡಿ ಸಂಗಣ್ಣ ಅಮರಪ್ಪ:– ಮಾನ್ಯ ಅಧ್ಯಕ್ಷರೇ, ನಾನು ಏನು ಪ್ರಶ್ನೆ ಕೇಳಿದ್ದೇನೆ ಎಂದರೆ, ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಎಷ್ಟು ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಫೇಸ್ ಹಾಗೂ ಗಂಟೆಗಳ ವಿವರ ನೀಡುವುದು ಎಂದು ಕೇಳಿದ್ದೇನೆ. ಅದಕ್ಕೆ ಅವರು, ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ತುರ್ತು ಪರಿಸ್ಥಿತಿಗಳಲ್ಲಿ ಹೊರತಾಗಿ ಸಾಮಾನ್ಯವಾಗಿ ದಿನವಹಿ 9 ಗಂಟೆಗಳ ಅವಧಿಗೆ 3 ಫೇಸ್ ವಿದ್ಯುತ್ ಹಾಗೂ 9 ಗಂಟೆಗಳ ಅವಧಿಗೆ ಸಿಂಗಲ್ ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ. ಇದು ಸತ್ಯಕ್ಕೆ ಬಹಳ ದೂರವಾದಂಥ ಉತ್ತರ ಎಂದು ನಾನು ಭಾವಿಸುತ್ತೇನೆ. ಶೇಕಡ 20 ರಿಂದ 25ರಷ್ಟು ವಿದ್ಯುತ್ ಕಡಿತಗೊಳಿಸುತ್ತೇವೆ ಎಂದು ನೀವು ಈಗ ತಾನೇ statement ಮಾಡಿದಿರಿ. ಆದರೆ ಪ್ರಶ್ನೆಗೆ ಈ ರೀತಿಯ ಉತ್ತರವನ್ನು ಹೇಳುತ್ತೀರಿ. ಗ್ರಾಮೀಣ ಭಾಗಗಳಲ್ಲಿ ರಾತ್ರಿಯ ಹೊತ್ತು 7 ಗಂಟೆಯಿಂದ 9 ಗಂಟೆಯವರೆಗೆ ವಿದ್ಯುತ್ ಇಲ್ಲ. 9 ಗಂಟೆಯ ಮೇಲೆ ಕೊಟ್ಟರೆ ಅಲ್ಲಿನ ಮಕ್ಕಳು ಹೇಗೆ ಓದಬೇಕು? ವಿದ್ಯುತ್ತಿನ ಅಭಾವದಿಂದಾಗಿ ಕುಡಿಯುವ ನೀರಿನ ಸರಬರಾಜು ಸಹ ಇವತ್ತು ಆಗುತಿಲ್ಲ. ಮನುಷ್ಯನಿಗೆ ಕುಡಿಯುವ ನೀರು ಎಷ್ಟು ಅವಶ್ಯವಿದೆ, ಮಕ್ಕಳಿಗೆ ಶಿಕ್ಷಣ ಎಷ್ಟು ಅವಶ್ಯವಿದೆ ಎನ್ನುವುದರ ಆಧಾರದ ಮೇಲೆ ನೀವು ಏನು ಕ್ರಮ ಕೈಗೊಂಡಿದ್ದೀರಿ ಎಂದು ಹೇಳಿ.

12.00 P.M.

ಯಾವ್ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಮೆಗಾವ್ಯಾಟ್ ಎಂದು ಅವರು ವಿದ್ಯುತ್ allocation ಕೊಟ್ಟಿದ್ದಾರೆ. ದಿನವಹಿ ಒಟ್ಟು 4,366 ಮೆ.ವ್ಯಾ ವಿದ್ಯುತ್ ಉತ್ಪಾದನೆಯಾಗುತ್ತದೆಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಇವರು ಹಂಚಿಕೆ ಮಾಡಿರುವುದು 4,787 ಮೆ.ವ್ಯಾ ವಿದ್ಯುತ್, ಇನ್ನೂ 279 ಮೆ.ವ್ಯಾ ಇವರ ಪ್ರಕಾರವೇ ಉಳಿದಿದೆ. ಇದನ್ನು ಎಲ್ಲಿ ಹಂಚಿಕೆ ಮಾಡುತ್ತಾರೆನ್ನುವುದು ಹೇಳಬೇಕಾಗುತ್ತದೆ. ಅದಲ್ಲದೆ, ಜಿಲ್ಲಾವಾರು allocation ಏನು ಮಾಡಿದ್ದಾರೆಂಬ ಬಗ್ಗೆ ಸ್ಥಳೀಯ ಅಧಿಕಾರಿಗಳನ್ನು ಸಂಪರ್ಕಿಸಿದಾಗ, ಕೊಪ್ಪಳ ಜಿಲ್ಲೆಯಲ್ಲಿ 130 ಮೆ.ವ್ಯಾ ವಿದ್ಯುತ್ ಅನ್ನು ನಮಗೆ allocation ಮಾಡಿದ್ದಾರೆಂದು ಹೇಳುತ್ತಾರೆ. ಇವರು, 185 ಮೆ.ವ್ಯಾ ವಿದ್ಯುತ್ ಅನ್ನು allocation ಮಾಡಿದ್ದೇವೆಂದು ಇಲ್ಲಿ statement ಕೊಟ್ಟಿದ್ದಾರೆ. ಇವರು ಕೊಟ್ಟಿರುವ ಉತ್ತರ ಸರಿಯೇ? ಅಥವಾ ಅಲ್ಲಿ ಅಧಿಕಾರಿಗಳು ಕೊಟ್ಟ ಉತ್ತರ ಸರಿಯೇ? ಮತ್ತೆ, ಅದಲ್ಲದೆ, ನೀವು interruption ಏಕೆ ಮಾಡುತ್ತೀರಿ ಎಂದು ನಾವು ಅಧಿಕಾರಿಗಳನ್ನು ಕೇಳಿದರೆ, ಇಲ್ಲ, C.E. Office ನಿಂದ ನೀವು immediate ಆಗಿ load shedding ಮಾಡಿ ಎಂದು ನಮಗೆ ಫೋನ್

ಮಾಡಿ ಒತ್ತಾಯ ಮಾಡುತ್ತಾರೆಂದು ಹೇಳುತ್ತಾರೆ. ಅದಲ್ಲದೆ, allocation ಆಗಿರುವುದರಲ್ಲಿಯೇ distribute ಅನ್ನು ಸರಿಯಾಗಿ ಮಾಡುತ್ತಿಲ್ಲ. ಏನೆಂದರೆ, 185 ಮೆ.ವ್ಯಾ. ವಿದ್ಯುತ್ ಕೊಟ್ಟ ಮೇಲೆ 45 ಮೆ.ವ್ಯಾ ವಿದ್ಯುತ್‌ನಲ್ಲಿಯೇ Maintain ಮಾಡಿ ಎಂದರೆ, ನಾವು ಹೇಗೆ ವಿದ್ಯುತ್ ಅನ್ನು ಬಳಕೆ ಮಾಡಬೇಕು? ನಾವು ಗ್ರಾಮೀಣ ಭಾಗದಲ್ಲಿ ಹೋಗುವುದಕ್ಕೇ ಆಗುತ್ತಿಲ್ಲ. ಫೋನ್ ಮೇಲೆ ಫೋನ್ ಮಾಡಿ, ನೀವು ಏತಕ್ಕೆ ಚುನಾಯಿತರಾಗಿದ್ದೀರಿ, ಇವತ್ತು ಒಂದು ಗಂಟೆ ಕೂಡ quality ವಿದ್ಯುತ್ ಬರುತ್ತಿಲ್ಲ. ಇದಕ್ಕೆ ಉತ್ತರ ಹೇಳಿ ಎಂದು ನಮಗೆ ರೈತರು ಅಷ್ಟೊಂದು ಹಿಂಸೆಯನ್ನು ಕೊಡುತ್ತಿದ್ದಾರೆ. ನಾನು ಅಂದು ಒಂದು ಅಭಿನಂದನೆ ಕಾರ್ಯಕ್ರಮಕ್ಕೆ ಹೋದಾಗ ಒಬ್ಬ ರೈತ ನನ್ನ ಕಾಲರ್ ಹಿಡಿದು, ನೀವು ಅಧಿವೇಶನದಲ್ಲಿ ಏನು ಮಾಡುತ್ತೀರಿ ಎಂದು ಕೇಳಿದ. ಇಂಥ ಸಂಕಷ್ಟದಲ್ಲಿ ರೈತ ಸಿಲುಕಿದ್ದಾನೆ. ಇದಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ಏನೇನು ಹಾಕಿಕೊಂಡಿದ್ದೀರಿ? ಒಂದು ಕಡೆ, ರಾಯಚೂರು ಶಾಖೋತ್ಪನ್ನ 2 ದುರಸ್ತಿಯಲ್ಲಿದೆ ಎಂದು ಹೇಳುತ್ತೀರಿ. Coal Stock ಇದೆ, ಅದನ್ನು ನಾವು ಇವತ್ತು ಪ್ರಾರಂಭ ಮಾಡುತ್ತೇವೆಂದು ಮತ್ತೊಂದು ಕಡೆ ಹೇಳುತ್ತೀರಿ. ಈ ಉತ್ತರ ಒಂದಕ್ಕೊಂದು ಸಮಂಜಸವಿಲ್ಲ. ಅದಕ್ಕೆ ಸರ್ಕಾರ ಸರಿಯಾದ, ಸಮಂಜಸವಾದ ಉತ್ತರವನ್ನು ಕೊಡಬೇಕೆಂದು ಕೇಳಬಯಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಇಂಧನ ಸಚಿವರು, ನಾವು ಗ್ರಾಮೀಣ ಪ್ರದೇಶದಲ್ಲಿ ದಿನವಹಿ 9 ಗಂಟೆ ವಿದ್ಯುತ್ ಅನ್ನು ಕೊಡುತ್ತಿದ್ದೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಇದಕ್ಕೆ ಬದ್ದರಾಗಿದ್ದಾರೆಯೇ ಎಂದು ನಾನು ಕೇಳಬಯಸುತ್ತೇನೆ. 3 phase ಗಂಟೆ, single phase ನಲ್ಲಿ 9 ಗಂಟೆ ವಿದ್ಯುತ್ ಕೊಡುತ್ತೇವೆಂದು ಹೇಳಿದ್ದಾರೆ. ಅನಿಯಮಿತ ವಿದ್ಯುತ್ ಕಡಿತಕ್ಕೆ ಕಾರಣವೇನೆಂದು ಕೇಳಿದ್ದಕ್ಕೆ, ಲಿಂಗನಮಕ್ಕಿ, ಸೂಪಾ, ವಾರಾಹಿಗಳಲ್ಲಿ ಇನ್ನೂ 10–15 ದಿನಗಳಿಗೆ ಆಗುವಷ್ಟು ನೀರಿದೆ, 10–15 ದಿನಗಳಾದ ತಕ್ಷಣ ಆ ಮೂರು ಕಡೆ Hydro ವಿದ್ಯುತ್ ಉತ್ಪಾದನೆ ನಿಲ್ಲುತ್ತದೆಂದು ಹೇಳಿದ್ದಾರೆ. ಆದ್ದರಿಂದ, ಮೂರು ಕಡೆ ವಿದ್ಯುತ್ ಉತ್ಪಾದನೆ ನಿಲ್ಲುವುದರಿಂದ ಬೇರೆ ಕಡೆ ಏನಾದರೂ ವಿದ್ಯುತ್ ಅನ್ನು ತರುತ್ತೀರಾ? ಏಕೆಂದರೆ, ಎಲ್ಲಾ ಕಡೆಯಿಂದ 4, 366 ಮೆ.ವ್ಯಾ ವಿದ್ಯುತ್ ಉತ್ಪಾದನೆಯಾಗುತ್ತದೆಂದು ಮಾನ್ಯ ಮಂತ್ರಿಗಳು ಹೇಳಿದರು. ಒಂದು ವೇಳೆ, ಲಿಂಗನಮಕ್ಕಿ, ಸೂಪಾ, ವಾರಾಹಿಗಳಲ್ಲಿ 10–15 ದಿನಗಳಲ್ಲಿ ನೀರಿ ಖಾಲಿಯಾದರೆ, ಅಲ್ಲೆಲ್ಲ Hydro ವಿದ್ಯುತ್ ಉತ್ಪಾದನೆ ನಿಲ್ಲುತ್ತದೆಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಮುಂದೆ ಅದಕ್ಕೇನು ಮಾಡುತ್ತೀರಿ?

ಮುಂದೆ ಬೇರೆ ಕಡೆಯಿಂದ ವಿದ್ಯುತ್ ತರುವಂಥ ಯೋಜನೆಯೇನಾದರೂ ಇದೆಯೇ ಎನ್ನುವುದನ್ನು ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು): 9 ಗಂಟೆ 3 phase, 9 ಗಂಟೆ single phase ಎಂದು ಉತ್ತರದಲ್ಲಿ ತಿಳಿಸಿದ್ದಾರೆ. One week 9 ಗಂಟೆ, 3 phase 9 ಗಂಟೆ, single phase 6 ಗಂಟೆ power cut down ಎಂದು Circular ನಲ್ಲಿ ಹೇಳಿದ್ದಾರೆ. ಇನ್ನೊಂದು ವೀಕ್ 8 ಗಂಟೆ 3 phase 10 ಗಂಟೆ Single phase, 6 ಗಂಟೆ power cut ಎಂದು ತಿಳಿಸಿದ್ದಾರೆ. ಆದರೆ, ಈಗ ಅಲ್ಲಿ ಕೊಡುತ್ತಿರುವುದು 2, 3 ಗಂಟೆ ಮಾತ್ರ. ಏಕೆಂದರೆ, ನಾವೆಲ್ಲ ಒತ್ತಾಯ ಮಾಡಿ ಕುಡಿಯುವ ನೀರಿನ ತೊಂದರೆ ಇದೆ ಎಂದು ಹೇಳಿರುವುದರಿಂದ ಆಮೇಲೆ, ಇವರು 2nd phase ನಲ್ಲಿ ರಾಯಚೂರು ಜಿಲ್ಲೆಗೆ allocation ಮಾಡಿರುವುದು **80** ಮೆ.ವ್ಯಾ ಎಂದು ಆಮೇಲೆ ಹೇಳುತ್ತಾರೆ. ಅವರಿಗೆ ಬೇಕಾಗಿರುವುದು 125–135 ಮೆ.ವ್ಯಾ ವಿದ್ಯುತ್ 80 ಮೆ.ವ್ಯಾ ಎಂದು ಹೇಳಿರುವುದು ಸುಳ್ಳು. ನಮ್ಮ ರಾಯಚೂರು ಜಿಲ್ಲೆಗೆ ಈಗ ಕೊಡುತ್ತಿರುವುದು 40 ಮೆ.ವ್ಯಾ ವಿದ್ಯುತ್ ಮಾತ್ರ. 40 ಮೆ.ವ್ಯಾ ವಿದ್ಯುತ್‌ನಲ್ಲಿ ಇಡೀ ಜಿಲ್ಲೆಗೆ ಅವರು arrange ಮಾಡಿಕೊಳ್ಳಬೇಕಾಗುತ್ತದೆ. ಬೇರೆ ಬೇರೆ ಜಿಲ್ಲೆಗಳಲ್ಲಿ ಬೇರೆ ಬೇರೆ ರೀತಿ ಇದೆ. ಸ್ಥಳೀಯವಾಗಿ ಉತ್ಪಾದನೆಯಾಗುವ ವಿದ್ಯುತ್ ಅನ್ನು ಅದೇ ಜಿಲ್ಲೆಗೆ ಕೊಡುತ್ತಾರೆ. ಕೊಪ್ಪಳದಲ್ಲಿ, ಬಳ್ಳಾರಿ ಜಿಲ್ಲೆಯಲ್ಲಿ ಜಾಸ್ತಿ ಏಕೆ ಇದೆ ಎಂದು ನಾನು ಕೇಳಿದಾಗ, ಅಲ್ಲಿ ಸ್ಥಳೀಯವಾಗಿ ಏನು ವಿದ್ಯುತ್ ಉತ್ಪಾದನೆಯಾಗುತ್ತದೆ, ಅದನ್ನು 33 ಕೆ.ವಿ.ಗೆ ತೆಗೆದುಕೊಳ್ಳುತ್ತೇವೆ, Main Grid ಗೆ ಹೋಗುವುದಿಲ್ಲ. ಹಾಗಾಗಿ, ಅಲ್ಲಿ ಅದನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿದರು. ನಮ್ಮ ರಾಯಚೂರಿನಲ್ಲಿ ಉತ್ಪಾದನೆ ಇಲ್ಲವೆಂದು ಸರ್ಕಾರದವರು ಹೇಳಿದರು. ನಮ್ಮ ಪರಿಸ್ಥಿತಿ ಹಾಗಿದ್ದರೆ, ರಾಯಚೂರಿನಲ್ಲಿ Thermal Plant ಇಟ್ಟುಕೊಂಡು ಬೆಳಕಿನ ಬುಡದಲ್ಲಿ ಕತ್ತಲಿದ್ದ ಹಾಗೆ ಇದ್ದೇವೆ. ಹಾಗಾದರೆ, Thermal Plant ನಮ್ಮ ಜಿಲ್ಲೆಯಲ್ಲಿದೆ. ಮೊದಲು ನಮ್ಮ ಜಿಲ್ಲೆಗೆ ಎಷ್ಟು ವಿದ್ಯುತ್ ಕೊಡಬೇಕೋ ಅಷ್ಟು ಕೊಟ್ಟು ನಂತರ ಅವರು ಬೇರೆ ಜಿಲ್ಲೆಗೆ ಕೊಡಬಹುದು. ಆದ್ದರಿಂದ, ಈ ಉತ್ತರ ಕೂಡ ತಪ್ಪಿದೆ.

ಶ್ರೀ ಹೆಚ್.ಪಿ. ಬಾಲಕೃಷ್ಣ: ಅಧಿಕಾರಿಗಳು ಸುಳ್ಳು ಉತ್ತರವನ್ನು ಕೊಟ್ಟು ಮಂತ್ರಿಗಳನ್ನು ಮತ್ತು ಸದನವನ್ನು ತಪ್ಪು ದಾರಿಗೆಳೆಯುತ್ತಿದ್ದಾರೆ. 9 ಗಂಟೆ ಮತ್ತು 9 ಗಂಟೆ ಒಟ್ಟು 18 ಗಂಟೆ ವಿದ್ಯುತ್ ಕೊಡುತ್ತೇವೆಂದು ಹೇಳಿ, 2 ಗಂಟೆ ಸಹ ಸರಿಯಾಗಿ ವಿದ್ಯುತ್ ಕೊಡುತ್ತಿಲ್ಲ.

ನಾವು ಆಗಲೇ ಹೇಳಿದ ಹಾಗೆ correct ಆಗಿ ಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕು. ಹಳ್ಳಿಯಲ್ಲಿ ಎಷ್ಟು ಗಂಟೆ ವಿದ್ಯುತ್ ಕೊಡುತ್ತಾರೆ, 3phase, single phase ವಿದ್ಯುತ್ ಅನ್ನು ಎಷ್ಟೆಷ್ಟು ಗಂಟೆ ಕೊಡುತ್ತಾರೆಂಬ ಬಗ್ಗೆ ಸದನಕ್ಕೆ ಸರಿಯಾದ ಮಾಹಿತಿಯನ್ನು ಕೊಡಬೇಕೆಂದು ತಮ್ಮ ಮುಖಾಂತರ ಕೇಳಬಯಸುತ್ತೇನೆ.

ಶ್ರೀ ಆರ್. ಧ್ರುವನಾರಾಯಣ: ವಿದ್ಯುತ್ ಅನ್ನು ಜಿಲ್ಲಾವಾರು ಹಂಚಿಕೆ ಮಾಡಿದ್ದಾರೆ. ಜಿಲ್ಲಾವಾರು ಹಂಚಿಕೆ ಮಾಡುವುದಕ್ಕೆ ಅನುಸರಿಸುತ್ತಿರುವ ಮಾನದಂಡವೇನೆಂದು ಕೇಳಬಯಸುತ್ತೇನೆ. ಏಕೆಂದರೆ, ಚಾಮರಾಜನಗರ ಜಿಲ್ಲೆಗೆ 26 ಮೆ.ವ್ಯಾ. ವಿದ್ಯುತ್ ಅನ್ನು ಮಾತ್ರ allocate ಮಾಡಿದ್ದಾರೆ. ಅದೇ, ಹಾಸನಕ್ಕೆ 61 ಮೆ.ವ್ಯಾ, ಮಂಡ್ಯಕ್ಕೆ 104 ಮೆ.ವ್ಯಾ. ಮೈಸೂರು, ಮಡಿಕೇರಿಗೆ 187 ಮೆ.ವ್ಯಾ ವಿದ್ಯುತ್ ಅನ್ನು allocate ಮಾಡಿದ್ದಾರೆ. ಆದ್ದರಿಂದ, ನೀವು ಅನುಸರಿಸುವ ಮಾನದಂಡವೇನೆಂದು ಮಾನ್ಯ ಮಂತ್ರಿಗಳನ್ನು ಕೇಳಬಯಸುತ್ತೇನೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ನಮ್ಮ ಕೊಪ್ಪಳ ಜಿಲ್ಲೆಗೆ ಬೇಕಾಗಿರುವುದು 135 ಮೆ.ವ್ಯಾ ವಿದ್ಯುತ್, allocation ಆಗಿರುವುದು 85 ಮೆ.ವ್ಯಾ. ವಿದ್ಯುತ್. ಆದರೆ, ನಾವು Grid ಹತ್ತಿರ ಹೋಗಿ ಕುಳಿತು ಅಧಿಕಾರಿಗಳನ್ನು ಕೇಳಿದಾಗ, ಪ್ರತಿ ದಿನ 40 ಮೆ.ವ್ಯಾ ವಿದ್ಯುತ್‌ಅನ್ನು ಮಾತ್ರ ಕೊಡುತ್ತಿದ್ದಾರೆ. Suspend ಮಾಡುತ್ತೇವೆಂದು ಅವರಿಗೆ phone ನಲ್ಲಿ ಬೆಂಗಳೂರಿನಿಂದ ಹೇಳಿರುವುದನ್ನು ಅಲ್ಲಿದ್ದ speaker on ಮಾಡಿ, ಆ ಅಧಿಕಾರಿಗಳು ನಮಗೆ ಕೇಳಿಸಿದರು. ರೈತರೆಲ್ಲ ಮುತ್ತಿಗೆ ಹಾಕಿ ಧರಣಿ ಮಾಡಿದಾಗ ನಾನೇ ಅಲ್ಲಿಯೇ 2 ಗಂಟೆ ಕಾಲ ಕುಳಿತಿದ್ದೆ. ಪ್ರತಿ ದಿವಸಕ್ಕೆ ಕೇವಲ 40 ಮೆ.ವ್ಯಾ ವಿದ್ಯುತ್ ಕೊಡುತ್ತಾರೆ. ಇದು ಬಹಳ ಕಡಿಮೆ. ನಮಗೆ 9 ಗಂಟೆ ವಿದ್ಯುತ್ ಬೇಡ, 8 ಗಂಟೆ ಕೊಡಲಿ. ಬೆಳಿಗ್ಗೆ 4 ಗಂಟೆ, ಸಂಜೆ 4 ಗಂಟೆ quality ವಿದ್ಯುತ್ ಕೊಡುವ ವ್ಯವಸ್ಥೆಯಾಗಬೇಕು. ಉಳಿದಂತೆ, ನೀವು single phase ಕೊಟ್ಟರಷ್ಟೇ, ಬಿಟ್ಟರಷ್ಟೇ. ಆದರೆ ರಾತ್ರಿ ಮಾತ್ರ 6 ಗಂಟೆಯಿಂದ 9 ಗಂಟೆಯವರೆಗೆ single phase ವಿದ್ಯುತ್ ಕೊಡಬೇಕು. ಏಕೆಂದರೆ, ಮಕ್ಕಳು ಓದುವುದಕ್ಕೆ ಬಹಳ ತೊಂದರೆಯಾಗಿದೆ. ಅದಕ್ಕೆ ದಯವಿಟ್ಟು ಅದರ ಬಗ್ಗೆ ವ್ಯವಸ್ಥೆಯಾಗಬೇಕು. Voltage ಹೆಚ್ಚು ಕಡಿಮೆ ಬಂದಾಗ ದಿನನಿತ್ಯ ಒಂದೊಂದು ತಾಲ್ಲೂಕಿನಲ್ಲಿ ಕನಿಷ್ಠ 6, 8 T.C. ಗಳು ಇವರ fault ನಿಂದ ಸುಡುತ್ತವೆ. ಅಲ್ಲಿ Sub Division ಇಲ್ಲ. ಒಂದು T.C. ಸುಟ್ಟು ಹೋದರೆ ಹಳ್ಳಿಗಳಲ್ಲಿ

3–4 ದಿವಸಗಳು ಕುಡಿಯುವುದಕ್ಕೆ ನೀರಿಲ್ಲದಂತಾಗುತ್ತದೆ. ಕುಷ್ಟಗಿಯಲ್ಲಿ 16 T.C.ಗಳು ಸುಟ್ಟುಹೋಗಿವೆ. ದಯವಿಟ್ಟು ಅದಕ್ಕೊಂದು ಸರಿಯಾದ ವ್ಯವಸ್ಥೆ ಮಾಡಬೇಕು.

ಶ್ರೀ ಉಮೇಶ್ ವಿ. ಕತ್ತಿ: ಕಳೆದ ಒಂದು ತಿಂಗಳಿನಿಂದ ವಿದ್ಯುತ್ ತೊಂದರೆಯಿಂದಾಗಿ, 9 ಗಂಟೆ ವಿದ್ಯುತ್ ಕೊಡುತ್ತೇವೆಂದು ಹೇಳುತ್ತಿದ್ದಾರೆ. 9 ಗಂಟೆ ಬೇಡ, 2 ಗಂಟೆ ವಿದ್ಯುತ್ ಕೊಡಲಿ ಸಾಕು. ಆದರೆ, ಕೊಡುವ 2 ಗಂಟೆ ವಿದ್ಯುತ್ every five minutes ನಂತೆ 60 ಸಲ drip ಆಗುತ್ತದೆ. ಇದರಿಂದ ರೈತರು ಹಾಳಾಗಿ ಹೋಗುತ್ತಿದ್ದಾರೆ. ಮೊದಲೇ ರೈತರು ಬೆಳೆ ಇಲ್ಲದೇ ತೊಂದರೆಗೆ ಸಿಲುಕಿದ್ದಾರೆ. ಇರುವ ನೀರನ್ನು ಬೆಳೆಗೆ ಹಾಯಿಸಬೇಕೆಂದರೆ, every 5-10 minutes drip ಆಗುತ್ತದೆ. ಅದನ್ನಾದರೂ ಸರಿಪಡಿಸಿ, ನೀವು ಒಂದು ಗಂಟೆ ಅಥವಾ ಎರಡು ಗಂಟೆ ಕೊಟ್ಟರೂ ಸರಿಯಾಗಿ ಕೊಡಿ. ಗಂಟೆಯಲ್ಲಿ ಮೂವತ್ತು ಸಲ drip ಆದರೆ ರೈತರು ಏನು ಮಾಡಬೇಕು? 9 ಗಂಟೆ ವಿದ್ಯುತ್ ಕೊಡುತ್ತೇವೆಂದು ಅಧಿಕಾರಿಗಳು ಬರೆದುಕೊಟ್ಟಿದ್ದನ್ನು ಹೇಳಬಹುದು. ಆದರೆ, ಇದು ಯಾವ ರೈತರಿಗೂ ತಲುಪುವುದಿಲ್ಲ. ಆದ್ದರಿಂದ, ಮಾನ್ಯ ಮಂತ್ರಿಗಳು ಸರಿಯಾದ ಉತ್ತರವನ್ನು ಇಲ್ಲಿಯಾದರೂ ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ: 9–9 ಗಂಟೆ ವಿದ್ಯುತ್ ಅನ್ನು ಇವತ್ತು ಕೊಡುತ್ತಿದ್ದೇವೆಂದು ನಾನು ಹೇಳುತ್ತಿಲ್ಲ. ದಯವಿಟ್ಟು, ಎಲ್ಲರೂ ಉತ್ತರವನ್ನು ಓದಿ. ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ತುರ್ತು ಪರಿಸ್ಥಿತಿಗಳ ಹೊರತಾಗಿ ಸಾಮಾನ್ಯವಾಗಿ ದಿನವಹಿ 9 ಗಂಟೆ ಅವಧಿಗೆ ಎಂದು ಇದೆ ..... (ಗೊಂದಲ)

ಅಧ್ಯಕ್ಷರು: ಅವರು ಉತ್ತರ complete ಮಾಡಲಿ. ನೀವೆಲ್ಲ ಪ್ರಶ್ನೆ ಕೇಳಿದ್ದೀರಿ, ಅದಕ್ಕೆ ನಾನು ಅವಕಾಶ ಕೊಟ್ಟಿದ್ದೇನೆ, ಈಗ ಅವರು ಉತ್ತರ ಕೊಡುವುದಕ್ಕೆ ಅವಕಾಶ ಕೊಡಿ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಜಯಚಂದ್ರರವರು, ವಿರೋಧ ಪಕ್ಷದ ಉಪ ನಾಯಕರು, ಘೋಷಣೆ ಮಾಡಿಬಿಡಿ ಎಂದು ಹೇಳುತ್ತಿದ್ದಾರೆ. ಇನ್ನು 10–15 ದಿವಸಗಳಲ್ಲಿ ಜಲಾಶಯಗಳಿಗೆ ನೀರು ಬರದಿದ್ದರೆ, ಏನು ಘೋಷಣೆ ಮಾಡಬೇಕೋ ಆ ಪರಮಾತ್ಮನಿಗೇ ಗೊತ್ತು. ಇಲ್ಲಿ ಕುಳಿತಿರುವ ಎಲ್ಲರನ್ನೂ ಕೇಳುವುದಕ್ಕೆ ಇಚ್ಛೆಪಡುತ್ತೇನೆ, ನಾವು discussion ನಲ್ಲಿ ತುಂಬಾ ಸ್ಪಷ್ಟವಾಗಿ ಹೇಳಿದ್ದೇವೆ, ಮಾನ್ಯ ಮುಖ್ಯಮಂತ್ರಿಗಳು ತುಂಬಾ ಸ್ಪಷ್ಟವಾಗಿ ಇದಕ್ಕೇನೇನು ಬೇಕೋ ಎಲ್ಲಾ ಪ್ರಯತ್ನ ಮಾಡುತ್ತೇವೆ, ಹಣವನ್ನೂ ಬಿಡುಗಡೆ

ಮಾಡುತ್ತೇವೆಂದು statement ಮಾಡಿದಾಗ, ನಿಮ್ಮೆಲ್ಲ ಪ್ರಶ್ನೆಗಳಿಗೂ ನಾನು ಉತ್ತರ ಕೊಟ್ಟಿದ್ದೇನೆ. ನಾನು ಏನೇನು ಪ್ರಯತ್ನವನ್ನು ನಡೆಸುತ್ತಿದ್ದೇವೆ, ರಾಯಚೂರಿನಲ್ಲಿ ಏನು ಮಾಡಬೇಕು.....

(ಗೊಂದಲ)

ಅಧ್ಯಕ್ಷರು: ಅವರು ಅವರ ಉತ್ತರವನ್ನು Complete ಮಾಡಲಿ.

(ಗೊಂದಲ)

ಶ್ರೀ ಸಿ.ಸಿ. ಪಾಟೀಲ್ : ರೇವಣ್ಣನವರು ಹಿಂದೆ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ, ಎಷ್ಟು ಗಂಟೆ ವಿದ್ಯುತ್ ಕೊಟ್ಟಿದ್ದಾರೆಂಬುದನ್ನು ಹೇಳಬೇಕಾಗುತ್ತದೆ.

(ಗೊಂದಲ)

ನೀವು ಮಂತ್ರಿಯಾಗಿದ್ದಾಗ ನಾನು ನೀರಾವರಿ ಮಂತ್ರಿಯಾಗಿದ್ದೆ. ಆಗ ಸಾಕಷ್ಟು ಮಳೆ ಬಂದು ನೀರಿತ್ತು. ಆಗ ನೀವು ಉತ್ತರ ಕೊಡುತ್ತಿದ್ದಿರಿ. ಅಂದು ಈ ಪರಿಸ್ಥಿತಿ ಇರಲಿಲ್ಲ. ರಾಜ್ಯದಲ್ಲಿ 15 ದಿನಗಳಲ್ಲಿ ಮಳೆ ಬರಲಿಲ್ಲವೆಂದರೆ ನಾನು ನೀವು ಈ ವಿಧಾನಸಭೆಯಲ್ಲಿ ಕೂಗಾಡಬಹುದೇ ವಿನಃ ಉತ್ತರ ಕೊಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ನಾನು ನಿಮಗೆ ಕೈಮುಗಿದು ಹೇಳುತ್ತೇನೆ. ನಾನು ಚರ್ಚೆ ಮಾಡುವಂಥ ಸಂದರ್ಭದಲ್ಲಿ ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದೇನೆ. ನಮ್ಮ ಪ್ರಯತ್ನದಲ್ಲಿ ಎಲ್ಲಿಯದರೂ ಸ್ವಲ್ಪವಾದರೂ ವ್ಯತ್ಯಾಸವಾಗಿದೆಯೇ? ಅದನ್ನು ತಾವು ತಿಳಿಸಿದರೆ ನಾನು ತಿದ್ದಿಕೊಳ್ಳುವುದಕ್ಕೆ ತಯಾರಿದ್ದೇನೆ. ರಾಯಚೂರಿನಲ್ಲಿ ಏನೇನು ಮಾಡಬೇಕೋ ಅದನ್ನು ಮಾಡುತ್ತಿದ್ದೇವೆ. ಬಳ್ಳಾರಿಯಲ್ಲಿ 28ನೇ ತಾರೀಖು ಪ್ರಾರಂಭ ಮಾಡುತ್ತಿದ್ದೇವೆ. ಜಿಂದಾಲ್, ಟಾಟಾದಿಂದ ಖರೀದಿ ಮಾಡುತ್ತಿದ್ದೇವೆ., exchange ನಿಂದ ಖರೀದಿ ಮಾಡುತ್ತಿದ್ದೇವೆ, ಬೇರೆ ಬೇರೆ ಕಡೆ ಹುಡುಕುತ್ತಿದ್ದೇವೆ. ಛತ್ತೀಸಗಡದಿಂದ ವಿದ್ಯುತ್ ತರುತ್ತಿದ್ದೇವೆ. ನಮ್ಮ ಪ್ರಯತ್ನದಲ್ಲಿ ಇಂಥ ತಪ್ಪು ಮಾಡಿದ್ದೇವೆಂದು ಹೇಳಿದರೆ ಖಂಡಿತ ನಾನು ಕ್ಷಮೆ ಕೇಳುತ್ತೇನೆ. ಅದಕ್ಕೋಸ್ಕರ ನಾನು ಹೇಳುವುದಕ್ಕೆ ಹೊರಟಿರುವುದು, ಸರ್ಕಾರ ಏನೇನು ಪ್ರಯತ್ನ ಮಾಡಬೇಕೋ ಆ ಎಲ್ಲ ಪ್ರಯತ್ನವನ್ನು ನಡೆಸುತ್ತಿದೆ. ಇನ್ನೂ ರಾಜ್ಯದಲ್ಲಿ, ದೇಶದಲ್ಲಿ ಎಲ್ಲೆಲ್ಲಿದೆಯೋ ಹುಡುಕುತ್ತೇವೆ, ಖಂಡಿತ ಬಿಡುವುದಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಇವತ್ತು ಎಷ್ಟು ಗಂಟೆ ವಿದ್ಯುತ್ ಕೊಡುತ್ತೀರಿ ಎಂದು ಕೇಳಿದರೆ ಏನು ಮಾಡಬೇಕು ಎನ್ನುವ ಉತ್ತರವನ್ನು ನೀವು ಹೇಳಿದರೆ ನಾನು ಹೇಳುವುದಕ್ಕೆ ತಯಾರಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಇಂಧನ ಸಚಿವರು ಏನು ಮಾಡಬೇಕೆಂದು ಕೇಳಿದರು.

ಅಧ್ಯಕ್ಷರು: ನೀವು ಹಿಂದೆ ಸಚಿವರಾಗಿದ್ದೀರಿ.

ಶ್ರೀ ಹೆಚ್.ಡಿ. ರೇವಣ್ಣ: ಈಗ ಎಲ್ಲದಕ್ಕೂ ಹೋಮ ಮಾಡಿಸುತ್ತಿದ್ದಾರೆ. ಸರ್ಕಾರ ಅಧಿಕಾರಕ್ಕೆ ಬರುವುದಕ್ಕೂ ಹೋಮ ನಡೆಯುತ್ತಿದೆ. ಆದರೆ, ಮಳೆಯಾಗುವುದಕ್ಕೆ ಏಕೆ ಈಗ ಹೋಮ ಮಾಡಿಸಬಾರದು?

(ಗೊಂದಲ)

ಶ್ರೀ ಕೆ.ಜಿ. ಕುಮಾರಸ್ವಾಮಿ: ರೇವಣ್ಣನವರು ಮಾಡಿರುವಷ್ಟು ಹೋಮವನ್ನು ಈ ದೇಶದಲ್ಲಿ ಯಾರು ಮಾಡಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ನಾನು ರೇವಣ್ಣನವರಿಗೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ನೀವು ರಾಜ್ಯದಲ್ಲಿ ಮಳೆ ಬರದ ಹಾಗೆ ಏನಾದರೂ ಹೋಮ ಮಾಡಿದ್ದೀರಾ?

(ಗೊಂದಲ)

ಶ್ರೀ ಕೆ.ಜಿ. ಕುಮಾರಸ್ವಾಮಿ: ಮಳೆ ಬರುವುದಕ್ಕಲ್ಲ. ಅಧಿಕಾರ ಮಾಡುವುದಕ್ಕೋಸ್ಕರ ಹೋಮ ಮಾಡಿದ್ದಾರೆ. ಸಾರ್ವಜನಿಕರಿಗೋಸ್ಕರ ಅವರು ಹೋಮ ಮಾಡಿಲ್ಲ.

(ಗೊಂದಲ)

ಶ್ರೀ ಸಿ.ಟಿ. ರವಿ: ಮಳೆ ಬರದಿದ್ದಕ್ಕೆ ಹೋಮ ಇಲ್ಲ. ಮಾಟ ಮಾಡಿಸಿರುವ chances ಇದೆ.

(ಗೊಂದಲ)

ಶ್ರೀ ಸಿ.ಸಿ. ಪಾಟೀಲ್: ಕೇರಳಕ್ಕೆ ಹೋಗಿ ಬಂದಿದ್ದಾರೆ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಇಂಧನ ಸಚಿವರು ಹೇಳಿದರು. (ಗೊಂದಲ) ಮಳೆ ಬರದ ಹಾಗೆ ಹೋಮ ಮಾಡಿಸಿದ್ದೀರಾ ಎಂದು ಕೇಳಿದರು. ನನ್ನ ಕಾಲದಲ್ಲಿ ಅಂಥ ಪ್ರಮೇಯವೇ ಇರಲಿಲ್ಲ. ನನ್ನ ಕಾಲದಲ್ಲಿ 36 ತಿಂಗಳು ಉತ್ತಮವಾದ ವಿದ್ಯುತ್ ಅನ್ನು ಬೆಂಗಳೂರು ನಗರಕ್ಕೆ ಮತ್ತು ರಾಜ್ಯದಲ್ಲೂ ಕೊಟ್ಟಿದ್ದೇನೆ. ಏಕೆಂದರೆ, ಅಂಥ ಪ್ರಮೇಯ ಬಂದಿರಲಿಲ್ಲ. ಹೋಮ ಮಾಡಿಸುವ ಪ್ರಮೇಯ ಬಂದಿರಲಿಲ್ಲ. ಈಗ ಹೋಮ ಮಾಡಿಸುವ ಪ್ರಮೇಯ ಬಂದಿದೆ. ಅದಕ್ಕೆ ಮಾಡಿಸಿ ಎಂದು ಹೇಳುತ್ತಿದ್ದೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ:- ರೈತರಿಗೆ, ಪಂಪ್ ಸೆಟ್ಟುಗಳಿಗೆ ಎಷ್ಟು ಗಂಟೆ ವಿದ್ಯುತ್ ಕೊಡುತ್ತಾರೆ? ಒಂದು ಗಂಟೆ, ಅರ್ಧ ಗಂಟೆಯೇ ಎಂದು ಸರಿಯಾಗಿ ಮಂತ್ರಿಗಳು ಹೇಳಬೇಕು. ದಯಮಾಡಿ ಅದನ್ನು ಹೇಳಬೇಕು.

ಅಧ್ಯಕ್ಷರು: ಈಶ್ವರಪ್ಪನವರು ಈಗ ಉತ್ತರ ಕೊಟ್ಟಿದ್ದಾರೆ.

ಶ್ರಿ ಹೆಚ್.ಸಿ. ಬಾಲಕೃಷ್ಣ: ಅದನ್ನು ಹೇಳದೇ ಹೋದರೆ ಈ question ಗೆ ಏನೂ ಅರ್ಥ ಬರುವುದಿಲ್ಲ. ಇಷ್ಟೇ ಕೊಡಿ ಎಂದು ನಾವು ಒತ್ತಡ ಮಾಡುತ್ತಿಲ್ಲ. ನಮಗೂ ಗೊತ್ತಿದೆ. ಸರಿಯಾಗಿ ಎಷ್ಟು ಗಂಟೆ ವಿದ್ಯುತ್ ಕೊಡುತ್ತೀರಿ ಎಂದು ದಯಮಾಡಿ ಹೇಳಬೇಕು.

ಅಧ್ಯಕ್ಷರು: ಹೇಳಿದ್ದರಲ್ಲಾ.

ಶ್ರೀ ಉಮೇಶ್ ವಿ.ಕತ್ತಿ: ಬೆಳಗಾಂ ತಾಲ್ಲೂಕಿನ ಹಳ್ಳಿಗಳಲ್ಲಿ ಕಳೆದ 48 ಗಂಟೆಗಳಿಂದ ವಿದ್ಯುತ್ ಇಲ್ಲ. ಬೇಕಾದರೆ check ಮಾಡಿ.

ಅಧ್ಯಕ್ಷರು: ನೋಡುತ್ತೇವೆಂದು ಹೇಳಿದ್ದಾರಲ್ಲಾ.

ಶ್ರೀ ಉಮೇಶ್ ವಿ.ಕತ್ತಿ: ಈ ರೀತಿಯಾದರೆ ರೈತರು ಹೇಗೆ ಬೆಳೆ ಬೆಳೆಯುತ್ತಾರೆ? ಎಷ್ಟು ಗಂಟೆ ವಿದ್ಯುತ್ ಕೊಡುತ್ತೀರೆಂದು ಖಚಿತವಾಗಿ ಹೇಳಬೇಕು. ಅಧಿಕಾರಿಗಳು ಬರೆದುಕೊಟ್ಟಿದ್ದನ್ನು ಇಲ್ಲಿ ಓದಿ ಹೇಳಿದರೆ ಅದರಿಂದೇನೂ ಪರಿಹಾರ ಸಿಗುವುದಿಲ್ಲ. ತೊಂದರೆ ಇರುವುದು ನಮಗೂ ಅರ್ಥವಾಗುತ್ತದೆ. ಮಳೆಯಾಗಿಲ್ಲ. ವಿದ್ಯುತ್ ಉತ್ಪಾದನೆಗೆ ತೊಂದರೆಯಾಗಿದೆ. ಇರುವ ವಿದ್ಯುತ್ ಅನ್ನು ಸರಿಯಾದ ರೀತಿ ಹಂಚಿಕೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಸರ್ಕಾರ ಜವಾಬ್ದಾರಿ ತೆಗೆದುಕೊಂಡು ಮಾಡಬೇಕು.

ಅಧ್ಯಕ್ಷರು: ಕತ್ತಿಯವರೆ, ರೇವಣ್ಣನವರ ನೇತೃತ್ವದಲ್ಲಿ ಹೋಮ ತಯಾರಾಗಲಿ.

ಶ್ರೀ ಹೆಚ್.ಡಿ. ರೇವಣ್ಣ: ನನಗೆ ಪ್ರಮೇಯವಿಲ್ಲ. ಈಶ್ವರಪ್ಪನವರಿಗೆ ಹೇಳುತ್ತಿದ್ದೇನೆ.

ಅಧ್ಯಕ್ಷರು: ರೇವಣ್ಣನವರೇ ನೇತೃತ್ವ ವಹಿಸಲಿ. ಬಹಳಷ್ಟು ಒಳ್ಳೆಯದಾಗುತ್ತದೆ. ಈಗ ಎನ್. ಸಂಪಂಗಿಯವರೆ ಪ್ರಶ್ನೆ ಕೇಳಿ. (ಗೊಂದಲ) ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನಾನು ಸಾಕಷ್ಟು ಕಾಲಾವಕಾಶ ಕೊಟ್ಟಿದ್ದೇನೆ. (ಗೊಂದಲ) ಕರಡಿ ಸಂಗಣ್ಣನವರೆ ನೀವು ಕೇಳಿರುವುದು ಮುಖ್ಯ ಪ್ರಶ್ನೆಯಾಗಿದ್ದು ಇದರಲ್ಲಿ sub question ಏನಾದರೂ ಕೇಳುವುದಿದ್ದರೆ ಕೇಳಿ. (ಗೊಂದಲ) ಇನ್ನು ಸಾಕು. ಅವರು statement ಕೊಟ್ಟಿದ್ದಾರೆ. ಆಗಲೂ ಚರ್ಚೆಯಾಯಿತು.

ಶ್ರೀ ಟಿ.ಬಿ. ಜಯಚಂದ್ರ: statement ಕೊಟ್ಟಿದ್ದಾರೆ. ತುರ್ತು ಪರಿಸ್ಥಿತಿಗಳ ಹೊರತಾಗಿ ಎಂದು ಹೇಳಿದ್ದಾರೆ. ಈಗ ತುರ್ತು ಪರಿಸ್ಥಿತಿ ಇದೆಯೆಂದು ಘೋಷಣೆ ಮಾಡಿದರೆ problem ಇರುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಜಯಚಂದ್ರರವರೆ, ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಪದೇ ಪದೇ ಕೇಳುವುದು ಬೇಡ.

ಶ್ರೀ ಟಿ.ಬಿ. ಜಯಚಂದ್ರ: 15–20 ದಿವಸಗಳಾದ ಮೇಲೆ ಆವತ್ತು ಏನು ಮಾಡಬೇಕೆಂದು ಯೋಚನೆ ಮಾಡೋಣ. ಈಗ ಎಷ್ಟು ಗಂಟೆ ವಿದ್ಯುತ್ ಕೊಡುತ್ತೀರಿ? ಹೇಳಿ.

ಅಧ್ಯಕ್ಷರು: ಕರಡಿ ಸಂಗಣ್ಣನವರೇ ಉಪ ಪ್ರಶ್ನೆ ಕೇಳಿ.

ಶ್ರೀ ಟಿ.ಬಿ. ಜಯಚಂದ್ರ: ಇದು ಎಲ್ಲರ ಪ್ರಶ್ನೆ. ದಯಮಾಡಿ ಇದಕ್ಕೆ .....

ಅಧ್ಯಕ್ಷರು: ಪರಿಸ್ಥಿತಿ ಏನೆಂದು ಹೇಳಿದರು. ನೀವು ಹಿಂದೆ ಸರ್ಕಾರದಲ್ಲಿದ್ದಿರಿ (ಗೊಂದಲ) ಇದೇ ಪರಿಸ್ಥಿತಿ ಇದ್ದರೆ ಕೊಡುತ್ತಿದ್ದಿರಾ?

ಶ್ರೀ ಟಿ.ಬಿ. ಜಯಚಂದ್ರ: ಎಷ್ಟು ಗಂಟೆ ವಿದ್ಯುತ್ ಕೊಡುತ್ತೀರೆಂದು ಹೇಳಬೇಕಲ್ಲವೇ?

ಅಧ್ಯಕ್ಷರು: ಪರಿಸ್ಥಿತಿ ಏನೆಂಬುದನ್ನು ಅವರು ಸ್ಪಷ್ಟವಾಗಿ ಹೇಳಿದ್ದಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಪರಿಸ್ಥಿತಿ ಕೆಟ್ಟದಾಗಿರುವಾಗ .....

ಅಧ್ಯಕ್ಷರು: ಕರಡಿ ಸಂಗಣ್ಣನವರೆ ಉಪ ಪ್ರಶ್ನೆ ಕೇಳಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಅವರು ಹೇಳಿದ ಪ್ರಕಾರ 4336 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಆಗುತ್ತದೆಂದು ಹೇಳಿದ್ದಾರೆ. Allocation ಪ್ರಕಾರ 4087 ಮೆ.ವ್ಯಾ ವಿದ್ಯುತ್ ಹಂಚಿದ್ದಾರೆ. ಅದರೆ, ಇನ್ನೂ ಉಳಿದಿರುವುದು 279 ಮೆ.ವ್ಯಾ. ವಿದ್ಯುತ್. ಅದನ್ನು ಯಾವ ಕಡೆ ಹಂಚಿದ್ದಾರೆ? ಅಥವಾ ಅದನ್ನು ಹಾಗೆಯೇ ಇಟ್ಟುಕೊಂಡಿದ್ದಾರೆಯೇ? ಅದನ್ನು ಸ್ಪಷ್ಟಪಡಿಸಬೇಕು. 9 ಗಂಟೆ ಅಲ್ಲ, quality ವಿದ್ಯುತ್ ಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ: ಇದರಲ್ಲಿ ಉತ್ಪಾದನಾ ಸಾಮರ್ಥ್ಯ 4366 ಮೆ.ವ್ಯಾ., ಹಂಚಿಕೆ ಮಾಡಿರುವುದು 4087 ಮೆ.ವ್ಯಾ ಇನ್ನು ಉಳಿದದ್ದು ಪ್ರಸರಣಾ ಮತ್ತು ವಿತರಣೆಯಲ್ಲಿ 9% ನಷ್ಟವಾಗುತ್ತದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಅದನ್ನು ಉತ್ತರದಲ್ಲಿ ಹೇಳಲಿಲ್ಲ. ಅದನ್ನು ಮೊದಲೇ ಉತ್ತರದಲ್ಲಿ ಹೇಳಬೇಕಾಗಿತ್ತು. Quality power ಅನ್ನು ಎಷ್ಟು ಗಂಟೆ ಕೊಡುತ್ತಾರೆ?

ಅಧ್ಯಕ್ಷರು: ಪದೇ ಪದೇ ಎಲ್ಲರೂ ಕೇಳಿದರೆ ಹೇಗೆ? ಅವರು ಆಗಲೇ ಉತ್ತರ ಕೊಟ್ಟಿದ್ದಾರೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಮುಂಗಾರು ಹಂಗಾಮಿನಲ್ಲಿ ಮಳೆ ವಿಫಲವಾಗಿದೆ.

ಅಧ್ಯಕ್ಷರು: ಮಳೆ ಪರಿಸ್ಥಿತಿ ಏನೆಂಬುದನ್ನು ನೀವು ಅರ್ಥ ಮಾಡಿಕೊಂಡಿದ್ದೀರಿ.

(ಗೊಂದಲ)

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಅವರೇ ಹೇಳಿದ್ದಾರೆ. ಕಲ್ಲಿದ್ದಲು. . .(ಗೊಂದಲ)

ಅಧ್ಯಕ್ಷರು: ಎಲ್ಲ ಪರಿಸ್ಥಿತಿ ಸರಿಯಿದ್ದಾಗ ಈ ಪ್ರಶ್ನೆ ಕೇಳಿದರೆ ಅಡ್ಡಿಯಿಲ್ಲ. ಸಂಪಂಗಿಯವರೆ ತಾವು ಪ್ರಶ್ನೆ ಕೇಳಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ರಾಯಚೂರು plant ದುರಸ್ತಿಯಲ್ಲಿದೆ. ಅದನ್ನೇಕೆ ದುರಸ್ತಿ ಮಾಡುತ್ತಿಲ್ಲ?

ಅಧ್ಯಕ್ಷರು: ಪದೇ ಪದೇ ಅದನ್ನೇ ಕೇಳುತ್ತೀರಲ್ಲಾ.

ಶ್ರೀ ಕರಡಿ ಸಂಗಣ್ಣ ಅಮರಪ್ಪ: ಇದರ ಬಗ್ಗೆ half an hour ಚರ್ಚೆಗೆ ಅವಕಾಶ ಕೊಡಿ.

ಶ್ರೀ ಉಮೇಶ್ ವಿ. ಕತ್ತಿ: ಇದು ಬಹಳ important ಇದೆ. half an hour ಚರ್ಚೆಗೆ ತೆಗೆದುಕೊಂಡರೆ ಒಳ್ಳೆಯದು.

ಅಧ್ಯಕ್ಷರು: Notice ಕೊಡಿ. ಆಯಿತು. ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೊಡುತ್ತೇನೆ.

ರಸ್ತೆಗಳ ದುರಸ್ಥಿ

25 (145) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ, ಗುಡಿಬಂಡೆ ತಾಲ್ಲೂಕಿನಲ್ಲಿ ಪಂಚಾಯತ್ ರಾಜ್ ಅಧೀನದಲ್ಲಿರುವ ರಸ್ತೆಗಳ ಕಿಲೋಮೀಟರ್ ವಾರುಗಳ ಸಂಖ್ಯೆ ಎಷ್ಟು; ಇವುಗಳು ಸಂಚಾರಕ್ಕೂ ಸಹ ಯೋಗ್ಯವಾಗಿಲ್ಲದೇ ಈ ಭಾಗದ ಜನತೆಯು ತುಂಬಾ ತೊಂದರೆಯನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;